ಇ) ಒಳರೋಗಿಗಳಿಗೆ ಸಂಜೆಯ ಆಹಾರವನ್ನು ಅಪರಾಹ್ನ 6 ಘಂಟೆಗೆ ವಿತರಣೆ ಮಾಡಲಾಗುತ್ತಿದ್ದು ಈ ಬಗ್ಗೆ ಯಾರಿಂದಲೂ ದೂರು ಬಂದಿರುವುದಿಲ್ಲಾ. 765 ಹಾಸಿಗೆಗಳ ಈ ಆಸ್ಪತ್ರೆಗೆ ಮಂಜೂರಾಗಿರುವ ಅಡುಗೆ ಕೆಲಸಗಾರರು 15 ಆಗಿದ್ದು ಆ ಪೈಕಿ 7 ಹುದ್ದೆಗಳು ಖಾಲಿ ಇದ್ದು ರಾತ್ರಿ ಪಾಳಿಯಲ್ಲಿ ಕನಿಷ್ಠ ಸಿಬ್ಬಂದಿ ಇರುವುದರಿಂದ ಆಹಾರ ವಿತರಣೆ ರಾತ್ರಿ 8 ಗಂಟೆಗೆ ಮಾಡಲು ಅನಾನುಕೂಲವಾಗಿದೆ.

ಈ) ಜಿಲ್ಲಾ ಶಸ್ತ್ರಚಿಕಿತ್ಸಕರ ಹುದ್ದೆ ಖಾಲಿ ಇದ್ದು ಆರ್.ಎಂ.ಓ. ರವರೇ ಆ ಹುದ್ದೆಯ ಪ್ರಭಾರ ವಹಿಸಿಕೊಂಡು ಕಾರ್ಯನಿರ್ವಹಿಸುತ್ತಿದ್ದಾರೆ. ಹಾಗೂ ಅವರ ಸಹಾಯಕ್ಕಾಗಿ ಒಬ್ಬ ಹಿರಿಯ ತಜ್ಞರ ಸೇವೆಯನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ. ಸ್ವತಂತ್ರ ಕಾರ್ಯಭಾರವನ್ನು ಅವರದೆ(ಡಿ.ಎಂ.ಓ ಮತ್ತು ಆರ್.ಎಂ.ಓ) ವೇತನ ಶ್ರೇಣಿಯಲ್ಲಿ ನಿರ್ವಹಿಸುತ್ತಿದ್ದಾರೆ.

ಮಂಗಳೂರು ವೆನ್ಲಾಕ್ ಆಸ್ಪತ್ರೆಯ ಬಗ್ಗೆ

2180 - ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ವೆನ್ಲಾಕ್ ಆಸ್ಪತ್ರೆಯ ಫಾರ್ಮಸಿ ವಿಭಾಗದಲ್ಲಿ ತಯಾರಾದ ಔಷಧ ದ್ರಾವಣಗಳು ನೆರೆಯ ಜಿಲ್ಲೆಗಳಿಗೆ ಸರಬರಾಜು ಆಗುತ್ತಿದ್ದು - ಈಗ ಅಲ್ಲಿ ತಯಾರಾಗುವ ದ್ರಾವಣಗಳು ವೆನ್ಲಾಕ್ ಆಸ್ಪತ್ರೆಯ ಬೇಡಿಕೆಗೆ ಮಾತ್ರ ಸೀಮಿತವಾಗಿರುವುದು ನಿಜವೇ?

ಆ)1) ಈ ಫಾರ್ಮಸಿಯಲ್ಲಿ ಮುಂಚೆ ಎಷ್ಟು ಬಗೆಯ ಔಷಧಿ ದ್ರಾವಣಗಳು ತಯಾರು ಮಾಡಲಾಗುತ್ತಿತ್ತು?

(2) ಈಗ ಎಷ್ಟು ಬಗೆಯ ದ್ರಾವಣಗಳು ತಯಾರಾಗುತ್ತವೆ?

(3) ಉತ್ಪಾದನಾ ಸಾಮರ್ಥ್ಯ ಕಡಿಮೆಯಾಗಲು ಕಾರಣಗಳೇನು?

(4) ಉತ್ಪಾದನಾ ವೆಚ್ಚ ಈ ಮೊದಲು ಎಷ್ಟು ಇತ್ತು ಮತ್ತು ಈಗ ಎಷ್ಟಿದೆ?

ಇ)1) ಮಾರುಕಟ್ಟೆಯಲ್ಲಿ ಈ ದ್ರಾವಣಗಳ ಈಗಿನ ಬೆಲೆ ಎಷ್ಟು?

(2) ದ್ರಾವಣಗಳನ್ನು ಸರ್ಕಾರಿ ಫಾರ್ಮಸಿಗಳಲ್ಲಿ ತಯಾರಿಸುವುದರಿಂದ ಸರ್ಕಾರಕ್ಕೆ ಎಷ್ಟು ಲಾಭವಿದೆ?

(3) ಲಾಭದಾಯಕವೆಂದಾದಲ್ಲಿ ಪೂರ್ಣ ಪ್ರಮಾಣದಲ್ಲಿ ತಯಾರಿಸುವರೆ ಅಡೆತಡೆಗಳೇನು?

(4) ಲಾಭವಿಲ್ಲವೆಂದಾದಲ್ಲಿ ಅದರ ಬಗ್ಗೆ ಸರ್ಕಾರದ ಮುಂದಿನ ಕ್ರಮಗಳೇನು?

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :

ಅ) ಹೌದು.

ಆ)(1) 1975ರಿಂದ 1990ರವರೆಗೆ ಸುಮಾರು 10 ಬಗೆಯ ಔಷಧಗಳನ್ನು ತಯಾರಿಸಲಾಗುತ್ತಿದೆ.

(2) ಈಗ ಔಷಧಿ ತಯಾರಿಕಾ ಪರವಾನಿಗೆಯ ಪ್ರಕಾರ ಸುಮಾರು 5 ಬಗೆಯ ದ್ರಾವಣಗಳನ್ನು ತಯಾರಿಸಲಾಗುತ್ತಿದೆ.

(3) ಸಿಬ್ಬಂದಿಗಳ ಕೊರತೆ ಮತ್ತು ಸ್ಥಳಾಭಾವದಿಂದಾಗಿ ಉತ್ಪಾದನೆಯಲ್ಲಿ ಕೊರತೆಯುಂಟಾಗಿದೆ.

(4) ಉತ್ಪಾದನಾ ವೆಚ್ಚವು 1993-94ರಲ್ಲಿ ಒಂದು ಬಾಟಲಿಗೆ ರೂ. 16-01 ಇತ್ತು.

1994-95 ರಿಂದ ಈಚೆಗೆ ಒಂದು ಬಾಟಲಿಗೆ ರೂ. 13.00 ತಗಲುತ್ತಿದೆ.

ಇ)1) ಮಾರುಕಟ್ಟೆಯಲ್ಲಿ ಸುಮಾರು ರೂ. 25.00 ರಿಂದ 35-00 ರೂ.ಗಳಷ್ಟಾಗುತ್ತದೆ.

(2) ಪ್ರತಿ ಬಾಟಲಿಗೆ ಮುಕ್ತ ಮಾರುಕಟ್ಟೆಗೆ ಹೋಲಿಸಿದಲ್ಲಿ ಪ್ರತಿ ಶೀಷೆಗೆ 12 ರೂ. ನಿಂದ 22 ರೂ.ಗಳವರೆಗೆ ರೋಗಿಗಳಿಗೆ ಉಳಿತಾಯವಾಗುತ್ತದೆ.

(3) ಪೂರ್ಣ ಪ್ರಮಾಣದಲ್ಲಿ ತಯಾರಿಸಲು ಸಿಬ್ಬಂದಿ ಕೊರತೆ ಮತ್ತು ಸ್ಥಳಾಭಾವವನ್ನು ನಿವಾರಿಸಬೇಕಾಗಿದೆ.

(4) ಉದ್ಭವಿಸುವುದಿಲ್ಲ.

ವೆನ್‌ಲಾಕ್ ಆಸ್ಪತ್ರೆಯ ಕಟ್ಟಡ

2183 - ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೆನ್‌ಲಾಕ್ ಜಿಲ್ಲಾ ಆಸ್ಪತ್ರೆಯ ಮೆಡಿಕಲ್ ವಾರ್ಡ್ ಬಳಿಯ ಎಂ.ಆರ್.ಡಿ. ವಿಭಾಗದ ಬಳಿಯ ರೋಡನ್ನು ಅಗಲ ಮಾಡುವ ಉದ್ದೇಶದಿಂದ ಎಂ.ಆರ್.ಡಿ. ವಿಭಾಗದ 2-3 ರೂಂಗಳನ್ನು ಕೆಡವಿದ್ದು ಅದರ ಬದಲಿಗೆ ಒಂದು 3 ರೂಮಿನ ಬಿಲ್ಡಿಂಗ್ ಕಟ್ಟಿಸಲು ಕಾರ್ಪೊರೇಷನ್‌ನ ಒಪ್ಪಿಗೆ ಕೊಟ್ಟಿದೆಯೇ?

ಆ) ಈಗ ಸದ್ಯ ನೆಲಮಾಳಿಗೆಯ ಮೇಲೆ ಮೊದಲ ಮತ್ತು 2ನೇ ಅಂತಸ್ತುಗಳಲ್ಲಿ ಸ್ಪೆಷಲ್ - ಎ ವರ್ಗ ಮತ್ತು ಡೀಲಕ್ಸ್ ವರ್ಗದ ವಿ.ವಿ.ಐ.ಪಿ. ರೂಂಗಳನ್ನು ಕಟ್ಟಿಸಲು ಇದಕ್ಕೆ ತಗಲುವ ವೆಚ್ಚವನ್ನು ಸರ್ಕಾರವೇ ಭರಿಸುವುದೇ?

ಶ್ರೀ ಎ.ಬಿ. ಪಾಟೀಲ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :

ಅ) ವೆನ್‌ಲಾಕ್ ಜಿಲ್ಲಾ ಆಸ್ಪತ್ರೆಯ ಮೆಡಿಕಲ್ ವಾರ್ಡ್ ಮತ್ತು ಎಂ.ಆರ್.ಡಿ. ವಿಭಾಗಗಳ ಬಳಿಯ ಮಾರ್ಗವನ್ನು ಅಗಲಗೊಳಿಸುವ ಸಲುವಾಗಿ ಆಸ್ಪತ್ರೆಯ ಆವರಣದಿಂದ 16 ಸೆಂಟ್ಸ್ ಜಾಗವನ್ನು ಮಂಗಳೂರು ಮಹಾನಗರ ಪಾಲಿಕೆಗೆ ಧರ್ಮಾರ್ಥವಾಗಿ ಬಿಟ್ಟುಕೊಡಲು ಸರ್ಕಾರ ಮಂಜೂರಾತಿ ನೀಡಿದ್ದು, ನಾಶವಾಗುವ ಕಾಂಪೌಂಡು, ಗೋಡೆಗಳನ್ನು ಕಟ್ಟಿಕೊಡುವ ವೆಚ್ಚವನ್ನು ನಗರ ಪಾಲಿಕೆಯು ಭರಿಸತಕ್ಕದ್ದು ಎಂದು ಆದೇಶಿಸಲಾಗಿದೆ. ನಾಶವಾಗುವ ಕಟ್ಟಡ ಕಾಂಪೌಂಡು ಗೋಡೆಯನ್ನು ಪುನರ್ ನಿರ್ಮಾಣ ಮಾಡಲು ಆಯುಕ್ತರು, ಮಂಗಳೂರು ಮಹಾನಗರ ಪಾಲಿಕೆ ಇವರಿಗೆ ಅನುಮತಿ ನೀಡಲಾಗಿದೆ. ಜಿಲ್ಲಾಧಿಕಾರಿ ದಕ್ಷಿಣ ಕನ್ನಡ ಮಂಗಳೂರು ಇವರ ಸಲಹೆಯಂತೆ ಮಾಡಿಕೊಂಡಿರುವ ಕರಾರು ಪತ್ರದಲ್ಲಿ ಈ ಅಂಶಗಳನ್ನು ಸ್ಪಷ್ಟಪಡಿಸಲಾಗಿದೆ.

ಆ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ವೆನ್‌ಲಾಕ್ ಆಸ್ಪತ್ರೆ ಶಸ್ತ್ರ ಚಿಕಿತ್ಸೆ ಕೊಠಡಿಯ ದುರಸ್ತಿ

2182 - ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೆನ್‌ಲಾಕ್ ಜಿಲ್ಲಾ ಆಸ್ಪತ್ರೆಯ ಆಡಳಿತ ವಿಭಾಗದಲ್ಲಿರುವ ಮತ್ತು ಶಸ್ತ್ರ ಚಿಕಿತ್ಸಾ ಕೊಠಡಿ ಎ ಮತ್ತು ಬಿ ಸಂಬಂಧಪಟ್ಟ ಎಲ್‌ಐಎಫ್‌ಟಿ ದುರಸ್ತಿ ಮಾಡುವ ಸಾಧ್ಯತೆ ಇದೆಯೇ?

ಆ) ವೆನ್‌ಲಾಕ್ ಆಸ್ಪತ್ರೆಯಲ್ಲಿ ಲಭ್ಯವಿರುವ ಕ್ಷಕಿರಣ ಯಂತ್ರಗಳ ಸಂಖ್ಯೆ ಎಷ್ಟು? ಅವುಗಳಲ್ಲಿ ಸರಿಯಾಗಿ ಕೆಲಸ ನಿರ್ವಹಿಸುವ ಯಂತ್ರಗಳೆಷ್ಟು? ಎಕ್ಸರೇ ವಿಭಾಗದಲ್ಲಿ ಹಗಲು ಮತ್ತು ರಾತ್ರಿ ಕೆಲಸ ನಿರ್ವಹಿಸಲು ಬೇಕಾಗುವ ಸಿಬ್ಬಂದಿಗಳ ಸಂಖ್ಯೆ ಸಾಕಷ್ಟಿದೆಯೇ? ಕೊರತೆ ಇದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?